ಶ್ರೀ ಎಂ. ವೀರಪ್ಪ ಮೊಯಿಲಿ.— ಇದಕ್ಕೆ ನಾನು ಉತ್ತರ ಹೇಳಿದ್ದೇನೆ. ನನ್ನ ಈ ಕ್ಷಣದ ಮಾತು ಎಂದರೆ ಡ್ರಾ ಮಾಡದೆ ಕೊಟ್ಟಿದ್ದು ಯಾವುದೂ ಇಲ್ಲ. ಹಾಗೂ ಡ್ರಾ ಮಾಡಿದ್ದರೂ ಕೊಡದೇ ಇರುವುದು ಯಾವುದೂ ಇಲ್ಲ. ಒಂದು ವೇಳೆ ಡ್ರಾ ಮಾಡಿಯೂ ಹಣ ಕೊಡದಿದ್ದ ಪಕ್ಷದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇನೆ.

ಶಹಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ

೧೬೧. ಶಿವಶೇಖರಗೌಡ ಶಿರವಾಳ (ಶಹಾಪುರ).— ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಗುಲ್ಬರ್ಗಾ ಜಿಲ್ಲೆಯ ಶಹಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೨) ೧.೨೬ ಕೋಟಿ ರೂಪಾಯಿಗಳ ವೆಚ್ಚದ ಕುಡಿಯುವ ನೀರಿನ ಸರಬರಾಜು ಯೋಜನೆ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ?

೩) ಹಾಗಿದ್ದಲ್ಲಿ ಶಹಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಈ ಯೋಜನೆಗೆ ಮಂಜೂರಾತಿ ಕೊಟ್ಟು ಕೆಲಸವನ್ನು ಪ್ರಾರಂಭಿಸಲಾಗುವುದೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಬಂದಿದೆ.

೨) ನಿಜ. ರೂ. ೧.೨೬ ಕೋಟಿ ರೂಪಾಯಿಗಳ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತಯಾರಿಸಿ ಪುರಸಭೆ, ಶಹಾಪುರ ಇವರಿಗೆ ಮೇಲುರುಜು ಹಾಗೂ ಶರಾಪನ್ನು ಸಲ್ಲಿಸಲು ಕಳುಹಿಸಲಾಗಿದೆ.

೩) ಮೇಲಿನ ಮಾಹಿತಿ ಬಂದ ಕೂಡಲೇ ಹಣದ ವ್ಯವಸ್ಥೆ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಶಿವಶೇಖರ ಗೌಡ ಶಿರವಾಳ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಎರಡನೇ ಪ್ರಶ್ನೆಗೆ ಉತ್ತರವಾಗಿ ೧.೨೬ ಕೋಟಿ ರೂಪಾಯಿಗಳ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತಯಾರಿಸಿ ಪುರಸಭೆ, ಶಹಾಪುರ ಇವರಿಗೆ..... ಕಳಿಸಲಾಗಿದೆ ಎಂದು ಹೇಳಿದ್ದಾರೆ. ನನಗೆ ತಿಳಿದ ಪ್ರಕಾರ ಶಹಾಪುರ ಪುರಸಭೆಯವರು ಅನುಮತಿಗಾಗಿ ಕಳಿಸಿಕೊಟ್ಟಿದ್ದಾರೆ. ನಮ್ಮಲ್ಲಿ ಕುಡಿಯುವ ನೀರಿನ ಬರದಿಂದ ಶಾಶ್ವತವಾಗಿ ತೊಂದರೆಯಾದ ಕಾರಣ ಕಳೆದ ೩-೪ ವರ್ಷಗಳಿಂದ ಈ ಯೋಜನೆಯನ್ನು ಬಡ್ಜೆಟ್‌ನಲ್ಲಿ ಸೇರಿಸಿ ತೆಗೆದುಕೊಳ್ಳಬೇಕು, ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳುತ್ತಾ ಇದ್ದೇನೆ. ಆದ್ದರಿಂದ ಈ ವರ್ಷ ಈ ಕಾರ್ಯವನ್ನು ಪ್ರಾರಂಭ ಮಾಡಬೇಕು ಎಂದು ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರ ಅರ್ಥಮಾಡಿಕೊಂಡಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಆದ್ಯತೆ ಮೇರೆಗೆ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಕೊಡುತ್ತಿದ್ದೇನೆ.

ಶ್ರೀ ಶಿವಶೇಖರಗೌಡ ಶಿರವಾಳ.—ಈ ವರ್ಷ ಪ್ರಾರಂಭ ಮಾಡುತ್ತೀರಾ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—೧೯೯೦-೯೧ರ ಆರ್ಥಿಕ ವರ್ಷದಲ್ಲಿ ಪರಿಶೀಲಿಸಲಾಗುವುದು.

ಬನಶಂಕರಿ ೩ನೇ ಮತ್ತು ೪ನೇ ಫೇಸ್ ಮತ್ತು ೭ನೇ ಬ್ಲಾಕ್‌ನಲ್ಲಿ ರಚಿಸಲಾದ ಸೈಟುಗಳ ಬಗ್ಗೆ

ಶ್ರೀ ಬಿ. ರಾಮನಾಥ ರೈ.—ಮಾನ್ಯ ಅಧ್ಯಕ್ಷರೆ, ೧೮ (೪೬)ರ ಪ್ರಶ್ನೆಯನ್ನು ನಾನು ಕೇಳಲೇ ಇಲ್ಲ, ಈ ಪ್ರಶ್ನೆ ಹೇಗೆ ಬಂತು ಎಂದು ಗೊತ್ತಾಗಲಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಅವರು ಪ್ರಶ್ನೆ ಕೊಟ್ಟಿಲ್ಲ ಎಂದ ಮೇಲೆ ಕೊಟ್ಟವರು ಯಾರು ಎನ್ನುವುದು ಬೇಕಲ್ಲವೇ ?

ಅಧ್ಯಕ್ಷರು —ಅದನ್ನು ನಾನು ವಿಚಾರಿಸುತ್ತೇನೆ. ರಾಮನಾಥ ರೈ ಅವರೇ, ಇದರಲ್ಲಿ ನಿಮ್ಮ ಪಸ್ಕತ್ತು ಇದೆ, ೨–೩–೧೯೯೦ರಲ್ಲಿ ನೋಟೀಸ್ ಬಂದಿದೆ. ಇದನ್ನು ನಿಮಗೆ ಕಳಿಸಿಕೊಡುತ್ತೇನೆ, ನೋಡಿ.

ಶ್ರೀ ಬಿ. ರಾಮನಾಥ ರೈ.—ಯಾರೋ ಫೋರ್ಜರಿ ಮಾಡಿರಬೇಕು.

ಅಧ್ಯಕ್ಷರು.—ಅದನ್ನು ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್ಸ್‌ಗೆ ಕಳಿಸೋಣ.

೧೯೮೭–೮೮, ೮೮–೮೯, ೮೯–೯೦ರಲ್ಲಿ ರಾಜ್ಯದಲ್ಲಿ ನಡೆದಿರುವ ರಸ್ತೆಗಳ ದರೋಡೆ ಹಾಗೂ ಕೊಲೆಗಳ ಬಗ್ಗೆ

(೧೩) ಶ್ರೀ ಜಿ. ರಾಜೂಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೭–೮೮, ೧೯೮೮–೮೯ ಮತ್ತು ೧೯೮೯–೯೦ರ ವರೆಗೆ ರಾಜ್ಯದಲ್ಲಿ ನಡೆದಿರುವ ರಸ್ತೆಗಳ ದರೋಡೆ ಮತ್ತಿತರ ದರೋಡೆ ಹಾಗೂ ಕೊಲೆಗಳ ಸಂಖ್ಯೆ ಎಷ್ಟು ?

ಆ) ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ ?

ಇ) ಎಷ್ಟು ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ ? ಹಾಗೂ ಎಷ್ಟು ಜನರಿಗೆ ಪರಿಹಾರ ಒದಗಿಸಲಾಗಿದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೭, ೧೯೮೮, ೧೯೮೯ ಮತ್ತು ೧೯೯೦ರ ಫೆಬ್ರುವರಿ ಕೊನೆವರೆಗೆ ನಡೆದಿರುವ ರಸ್ತೆ ದರೋಡೆ, ಇತರ ದರೋಡೆ ಹಾಗೂ ಕೊಲೆ ಪ್ರಕರಣಗಳ ಸಂಖ್ಯೆಗಳು ಈ ಕೆಳಗಿನಂತಿವೆ.

	೧೯೮೭	೧೯೮೮	೧೯೮೯	೧೯೯೦ (ಫೆಬ್ರುವರಿ ಕೊನೆಯವರೆಗೆ)
ರಸ್ತೆ ದರೋಡೆಗಳ ಸಂಖ್ಯೆ	೧೯	೧೬	೯	೪
ಇತರ ದರೋಡೆಗಳ ಸಂಖ್ಯೆ	೧೫೧	೨೯೬	೨೧೯	೪೬
ಕೊಲೆಗಳ ಸಂಖ್ಯೆ	೧೧೧೨	೧೨೬೫	೧೨೨೨	೨೨೧

ಆ) ಮೇಲಿನ ಎಲ್ಲಾ ಪ್ರಕರಣಗಳಲ್ಲೂ ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಇ) ವಿವರಗಳು ಈ ಕೆಳಕಂಡಂತಿವೆ.

	೧೯೮೭	೧೯೮೮	೧೯೮೯	೧೯೯೦
ಶಿಕ್ಷೆಗೊಳಗಾದ ದರೋಡೆ ಪ್ರಕರಣಗಳ ಸಂಖ್ಯೆ	೪	೨	—	—
ದರೋಡೆ ಪ್ರಕರಣಗಳಲ್ಲಿ ಪರಿಹಾರ ಕೊಟ್ಟಿರುವ ವ್ಯಕ್ತಿಗಳ ಸಂಖ್ಯೆ	೧ ವ್ಯಕ್ತಿಗೆ	—	೧ ವ್ಯಕ್ತಿಗೆ	—
ಶಿಕ್ಷೆಗೊಳಗಾದ ಕೊಲೆ ಪ್ರಕರಣಗಳ ಸಂಖ್ಯೆ	೧೧೦	೫೨	೯	—
ಪರಿಹಾರ ಕೊಟ್ಟಿರುವ ವ್ಯಕ್ತಿಗಳ ಸಂಖ್ಯೆ	೧ ವ್ಯಕ್ತಿಗೆ	೯ ವ್ಯಕ್ತಿಗಳು	೩ ವ್ಯಕ್ತಿಗಳು	೫ ವ್ಯಕ್ತಿಗಳು